
ಪುಸ್ತಕ ಪರಿಚಯ

# ‘ತಮಸೋಮಾ ಜ್ಯೋತಿರ್ಗಮಯ’, ‘ಹೊಂಗಿರಣ’




ಶೀರ್ಷಿಕೆ:
**ತಮಸೋಮಾ ಜ್ಯೋತಿರ್ಗಮಯ**

ಲೇಖಕಿ:
**ಡಾ. ವಿ. ಶ್ರೀಮತಿ**

ಪ್ರಕಾಶಕರು:
**ಭಾರತೀ ಪ್ರಕಾಶನ,** ಸರಸ್ವತಿಪುರಂ,
ಮೈಸೂರು – ೫೭೦ ೦೦೯

ದೂರವಾಣಿ: ೨೫೪೩೯೪೧

ಪುಟಗಳು: ೨೧೪

ಬೆಲೆ: ೧೨೦/-

**ಮೈ**ಸೂರಿನ ಪದವಿ ಪೂರ್ವ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವ ಡಾ. ವಿ. ಶ್ರೀಮತಿಯವರ ಎರಡು ಕೃತಿಗಳು ಕಳೆದ ವರ್ಷ ಪ್ರಕಟವಾಗಿವೆ. ಇವುಗಳಲ್ಲಿ **‘ತಮಸೋಮಾ ಜ್ಯೋತಿರ್ಗಮಯ’** ಎಂಬುದು ಅನೇಕ ಸಂಸ್ಕೃತ ಕೃತಿಗಳ, ಸ್ತೋತ್ರ ಸಾಹಿತ್ಯ ಹಾಗೂ ಇತರ ಶಾಸ್ತ್ರಗ್ರಂಥಗಳ ಮೇಲೆ ಬರೆದ ವಿಮರ್ಶಾತ್ಮಕ ಲೇಖನಗಳ ಸಂಕಲನವಾಗಿದೆ. ಎರಡನೆಯದಾದ **‘ಹೊಂಗಿರಣ’**ವು ಆಕಾಶವಾಣಿಯಲ್ಲಿ ‘ಚಿಂತನ’ ಕಾರ್ಯಕ್ರಮದಲ್ಲಿ ಮೂಡಿ ಬಂದಿರುವ ವಿಚಾರಗಳ ಸಂಕಲನ. ನಿತ್ಯಜೀವನದಲ್ಲಿ ಎದುರಾಗುವ ಹತ್ತು ಹಲವು ವಿಚಾರಗಳನ್ನು ತಮ್ಮದೇ ಆದ ಚಿಂತನೆಯ ಒರೆಗೆ ಹಚ್ಚಿರುವ ಲೇಖಕಿ, ಶ್ರೇಷ್ಠ ಬದುಕಿಗೆ ಉಪಯುಕ್ತವಾಗುವ ಸಾಹಿತ್ಯವನ್ನು ಇಲ್ಲಿ ರಚಿಸಿದ್ದಾರೆ.

**‘ತಮಸೋಮಾ ಜ್ಯೋತಿರ್ಗಮಯ’** ಗ್ರಂಥದಲ್ಲಿ ಒಟ್ಟು ಹದಿನೆಂಟು ಲೇಖನಗಳಿವೆ. ಶ್ರೀ ಶಂಕರರ ಭಜಗೋವಿಂದಮ್, ಆತ್ಮಷಟ್ಕಮ್, ಲಕ್ಷ್ಮೀನೃಸಿಂಹಸ್ತೋತ್ರಮ್, ಪದಾವಲಂಬನ ಸುವರ್ಣಮಾಲಾಸ್ತುತಿ, ದಶಶ್ಲೋಕೀ, ಶ್ರೀಸುಬ್ರಹ್ಮಣ್ಯ ಭುಜಂಗಮ್, ಗೌರೀದಶಕವಮ್ – ಇವುಗಳ ವಿವರಣೆ ಹಾಗೂ ವಿಶ್ಲೇಷಣೆ ಇಲ್ಲಿದೆ. ಇಲ್ಲಿ ಭಕ್ತಪ್ರಧಾನವಾದ ಭಾವಗಳಿಗೆ ಶಾಸ್ತ್ರಸಮ್ಮತ ರೀತಿಯ ವಿವರಣೆ ನೀಡಲಾಗಿದೆ. ಕೆಲವೊಮ್ಮೆ ಶಾಸ್ತ್ರೀಯ ವಿವರಣೆಯ ಬಾಹುಳ್ಯದಲ್ಲಿ ಭಾವಾತ್ಮಕ ವಿಮರ್ಶೆ ಬಡವಾಗಿ ಹೋಯಿತೇನೋ ಎಂದೆನಿಸುತ್ತದೆ. ಆದರೆ ಸ್ತೋತ್ರಸಾಹಿತ್ಯದ ಜೀವನಾಡಿಯಾದ ಭಕ್ತಿ-ಭಾವ ಈ ಲೇಖನಗಳಲ್ಲೆಲ್ಲ ಹಾಸುಹೊಕ್ಕಾಗಿ ಅಭಿವ್ಯಕ್ತಿ ಪಡೆದಿದೆ. ಇದರೊಂದಿಗೆ ಶ್ರೀಶಂಕರರರ ಜೀವನ ಚರಿತ್ರೆ, ರಾಮಾಯಣ, ಶ್ರೀರಾಮಕೃಷ್ಣರ ಸಂದೇಶ, ಗುರುಮಹಿಮೆ, – ಇಂಥ ವೈವಿಧ್ಯಮಯವಾದ ವಿಷಯಗಳ ಮೇಲೆ ಬರೆದ ಲೇಖನಗಳೂ ಸೇರಿವೆ. ನಮ್ಮ ಸಂಸ್ಕೃತಿ, ಪರಂಪರೆ, ಆಧ್ಯಾತ್ಮಿಕತೆ – ಈ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಈ ಲೇಖನಗಳು ಕೃತಿಯ ಶೀರ್ಷಿಕೆಗೆ ಅನುಗುಣವಾಗಿ ಜನಜೀವನದಲ್ಲಿ ಕತ್ತಲಿನಿಂದ ಬೆಳಕಿನೆಡೆಗೆ ನಮ್ಮನ್ನು ಕರೆದೊಯ್ಯುವ ದಿವ್ಯಜ್ಯೋತಿಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ.

**‘ಹೊಂಗಿರಣ’** ಕೃತಿಯಲ್ಲಿನ ಲೇಖನಗಳು ನಮ್ಮ ದೈನಂದಿನ ಜೀವನದ ವಿವಿಧ ಚಟುವಟಿಕೆಗಳಿಗೆ ಸಂಬಂಧಪಟ್ಟಿವೆ. ಇವುಗಳಲ್ಲಿ ನಾವು ಕಂಡುಕೊಳ್ಳಬೇಕಾದ ಮೌಲ್ಯ, ಆಚಾರ-ವಿಚಾರ, ನಡವಳಿಕೆ; ಶ್ರೇಯಸ್ಸನ್ನು ತಂದುಕೊಡಬಲ್ಲ ಚಿಂತನೆ ಎದ್ದು ಕಾಣುವಂತಿದೆ. ಆಧುನಿಕ ಜನಜೀವನದ ನಡುವೆಯೂ ನಾವು ಮೂಡಿಸಿಕೊಳ್ಳಬಹುದಾದ ಹವ್ಯಾಸಗಳು, ಬಿಡಲೇಬೇಕಾದ ಸಂಗತಿಗಳು – ಇವು ಉತ್ತಮ ಬದುಕಿಗೆ ಅತ್ಯಗತ್ಯ ಎಂಬ ವಿಚಾರ ಇಲ್ಲಿ ಮೂಡಿಬಂದಿದೆ. ಸದಭಿರುಚಿಯ ಆಯ್ಕೆ, ಸಾಮಾಜಿಕ ಸಾಮರಸ್ಯ, ಶೈಕ್ಷಣಿಕ ಪ್ರಗತಿ ಮುಂತಾದ ಹತ್ತು ಹಲವು ವಿಷಯಗಳೊಂದಿಗೆ ನಮ್ಮ ಬದುಕಿನ ಹಲವು ಮುಖಗಳಲ್ಲಿ ಕಂಡುಬರುವ ಒಳಿತು-ಕೆಡಕುಗಳನ್ನು ಗುರುತಿಸುತ್ತಾರೆ; ಅವುಗಳಿಗೆ ಯೋಗ್ಯ ಪರಿಹಾರವನ್ನೂ ಸೂಚಿಸುತ್ತಾರೆ. ಕಂಪ್ಯೂಟರ್, ತಂತ್ರಜ್ಞಾನ, ಟ್ಯೂಷನ್ ಮೊದಲಾದ ಆಧುನಿಕ ವಿಚಾರಗಳೊಂದಿಗೆ ಸುಭಾಷಿತ, ಸ್ತೋತ್ರ , ಗಾದೆಮಾತು, ಸಂಸ್ಕೃತಿ ಮುಂತಾದ ಪರಂಪರೆಯ ವಿಷಯಗಳೂ ಇಲ್ಲಿ ಮೇಳೈಸಿ, ನಮ್ಮ ಪರಿಪಕ್ವ ಜೀವನಕ್ಕೆ ‘ಹಳೆಬೇರು-ಹೊಸಚಿಗುರು’ ಎರಡೂ ಅಗತ್ಯವೆಂಬುದನ್ನು ಮನಗಾಣಿಸಿ ಕೊಡಲಾಗಿದೆ.

ಚಿಂತನಯೋಗ್ಯವಾದ ಈ ಬರಹಗಳಿಂದ ಇವೆರಡೂ ಮೌಲಿಕ ಪ್ರಕಟನೆಗಳಾಗಿವೆ; ದೈನಂದಿನ ಬದುಕಿಗೆ ದಾರಿ ತೋರಬಲ್ಲ ವಿಚಾರಗಳನ್ನು ಇವು ಹೊಂದಿವೆ.

ಶೀರ್ಷಿಕೆ:
**ಹೊಂಗಿರಣ**


ಲೇಖಕಿ:
**ಡಾ. ವಿ. ಶ್ರೀಮತಿ**

ಪ್ರಕಾಶಕರು:
**ಕಣಿವೆ ಪ್ರಕಾಶನ**
೧೯೨, ೧೨ನೇ ಮೇನ್, ಕಾ.
ಆಸ್ಪತ್ರೆ ರಸ್ತೆ , ಸರಸ್ವತಿಪುರಂ,
ಮೈಸೂರು – ೫೭೦ ೦೦೯

ದೂರವಾಣಿ: ೨೫೪೧೦೮೫

ಪುಟಗಳು: ೮೮, ಬೆಲೆ: ೬೦/-





# ಭಗವತ್ಪ್ರೇಮಮಯ ನಾರಿ
# ಮೀರಾಬಾಯಿ

**ಸ್ವಾಮಿ ವೀರೇಶಾನಂದ**

“ಪ್ರಕೃತಿಯಲ್ಲೆಲ್ಲ ನಾವು ಪ್ರೇಮದ ಪ್ರಭಾವವನ್ನು ನೋಡುತ್ತಿದ್ದೇವೆ. ಸಮಾಜದಲ್ಲಿ ಯಾವುದು ಒಳ್ಳೆಯದೋ, ಶ್ರೇಷ್ಠವೋ, ಭವ್ಯವೋ ಅದೆಲ್ಲ ಪ್ರೇಮದ ಪರಿಣಾಮ. ಸಮಾಜದಲ್ಲಿ ಯಾವುದು ಅತಿ ಹೇಯವಾಗಿದೆಯೋ, ಅಷ್ಟು ಮಾತ್ರವಲ್ಲ ಯಾವುದು ರಾಕ್ಷಸೀಕೃತ್ಯವಾಗಿದೆಯೋ ಅದು ಕೂಡ ನೀಚ ಮಾರ್ಗಕ್ಕೆ ತಿರುಗಿದ ಪ್ರೇಮದ ಪ್ರಭಾವವೇ.” – ಇವು ಸ್ವಾಮಿ ವಿವೇಕಾನಂದರು ‘ಭಕ್ತಿಯೋಗ’ ಗ್ರಂಥದಲ್ಲಿ ಹೇಳುವ ಮಾತುಗಳು. ಮುಂದುವರೆದು ಅವರು, “ಇಂಥ ಪ್ರೇಮದ ಉನ್ನತ ಹಂತವೇ ಭಗವತ್ಪ್ರೇಮ” ಎಂದು ಹೇಳುತ್ತಾರೆ. ಭಗವತ್ಪ್ರೇಮದ ಉಚ್ಚ ಸ್ಥಿತಿಯಲ್ಲಿ **‘ತದರ್ಥ ಪ್ರಾಣಸಂಸ್ಥಾನ’** (ಪ್ರೀತಿಗಾಗಿಯೇ ಬದುಕಿರುವುದು) ಎಂಬ ಒಂದು ಹಂತವನ್ನು ಭಕ್ತನು ತಲುಪುತ್ತಾನೆ. ಸ್ವಾಮೀಜಿ ಈ ಸ್ಥಿತಿಯನ್ನು ಹೀಗೆ ವಿವರಿಸುತ್ತಾರೆ: “ಪ್ರೇಮಾದರ್ಶಕ್ಕೋಸ್ಕರವಾಗಿಯೇ ಅವನು ಬದುಕುವನು. ಆ ಪ್ರೇಮಕ್ಕಾಗಿ ಬದುಕುವುದು ಮನೋಹರವಾಗಿರುತ್ತದೆ, ಸುಯೋಗ್ಯವಾಗಿರುತ್ತದೆ. ಅದಿಲ್ಲದೆ ಜೀವನ ಒಂದು ಕ್ಷಣಕಾಲವೂ ಇರಲಾರದು.” ಮುಂದಿನ ಸ್ಥಿತಿ **‘ತದೀಯತಾ’** ಎನ್ನುವುದು. ಸ್ವಾಮೀಜಿ ಹೇಳುವಂತೆ, ಈ ಸ್ಥಿತಿಯಲ್ಲಿ ಸಾಧಕನ ಇಡೀ ಜೀವನ ಪರಿಶುದ್ಧವಾಗಿ ಸಂಪೂರ್ಣ ಬದಲಾಗುತ್ತದೆ. ಆಗ ಅವನು ಕೃತಕೃತ್ಯನಾಗುವನು. ಈ ಪ್ರಪಂಚದಲ್ಲಿ ಸರ್ವವೂ ಭಗವಂತನಿಗೆ ಸೇರಿರುವುದರಿಂದ ಎಲ್ಲವೂ ಪವಿತ್ರವಾಗುವುದು... ಹೀಗೆ ಭಕ್ತ ಭಗವಂತನನ್ನು ಪ್ರೀತಿಸಿದಾಗ ಇಡೀ ಬ್ರಹ್ಮಾಂಡವೇ ಅವನಿಗೆ ಪ್ರಿಯವಾಗುವುದು. ಏಕೆಂದರೆ ಇದೆಲ್ಲ ಅವನದೆ. ಇಂಥ ಅದ್ಭುತ ಭಗವತ್ಪ್ರೇಮದ ಹರಿಕಾರಳಾಗಿ ಬದುಕಿದವಳು ಮೀರಾಬಾಯಿ.

ಮೀರಾಬಾಯಿಯ ಹೆಸರನ್ನು ಕೇಳದವರಾರು? ಸುಪ್ರಸಿದ್ಧ ಗಾಯಕರ ಧ್ವನಿಯಲ್ಲಿ ಇಂದಿಗೂ ಆಕೆಯ ಭಜನೆಗಳು ಚಿರಂತನವಾಗಿ ನಿಂತಿವೆ; ಪರಿಶುದ್ಧ ಭಕ್ತಿಯ ತರಂಗಗಳನ್ನು ಭಕ್ತರ ಹೃದಯದಲ್ಲಿ ಉದ್ದೀಪಿಸುತ್ತವೆ. ಐತಿಹಾಸಿಕವಾಗಿ ಕೂಡ ಅವಳದೊಂದು ವಿಶಿಷ್ಟ ವ್ಯಕ್ತಿತ್ವ. ಹೀಗಿದ್ದೂ ಅವಳ ಜೀವನವೃತ್ತಾಂತದ ವಿಷಯದಲ್ಲಿ ವಿದ್ವಾಂಸರದು ಹಲವು ಅಭಿಪ್ರಾಯಗಳು. ಅವುಗಳಲ್ಲಿ ಹೆಚ್ಚು ಜನಪ್ರಿಯವಾದ ಗಾಥೆಯನ್ನು ನಾವಿಲ್ಲಿ ನೋಡೋಣ.

## ಜನನ ಮತ್ತು ಬಾಲ್ಯ

ಮೀರಾ ಹುಟ್ಟಿದ್ದು ೧೫೦೩ರಲ್ಲಿ, ಕ್ಷತ್ರಿಯ ರಾಜವಂಶದಲ್ಲಿ, ರಾಜಸ್ಥಾನದ ಮೇವಾರ ಪ್ರದೇಶದಲ್ಲಿರುವ ಕುಡ್ಕಿ ಎಂಬ ಹಳ್ಳಿಯಲ್ಲಿ. ತಂದೆಯ ಹೆಸರು ರತನ್ ಸಿಂಗ್. ಮೀರಾ ಮೂರುವರ್ಷದ ಕಿಶೋರಿಯಾಗಿರಬೇಕಾದರೆ, ಒಂದು ವಿಚಿತ್ರ ಘಟನೆ ನಡೆಯಿತು. ಅವಳ ಮನೆಗೆ ಸಂನ್ಯಾಸಿಯೊಬ್ಬನು ಬಂದನು. ಅವನ ಹತ್ತಿರ ಗಿರಿಧರನ (ಕೃಷ್ಣ) ವಿಗ್ರಹವಿತ್ತು. ಅದನ್ನು ಅವನು ನಿತ್ಯವೂ ಪೂಜಿಸುತ್ತಿದ್ದನು. ಪುಟ್ಟ ಮೀರಾ ಈ ಸುಂದರ ವಿಗ್ರಹದತ್ತ ಆಕರ್ಷಿತಳಾದಳು. “ನನಗದನ್ನು ಕೊಡಿ” ಎಂದು ಬೇಡಿಕೊಂಡಳು. ಸಂನ್ಯಾಸಿ ಒಲ್ಲೆನೆಂದನು. ಇಷ್ಟು ವರ್ಷಗಳ ಕಾಲ ಪೂಜಿಸುತ್ತಿದ್ದ ಈ ವಿಗ್ರಹದ ಮೇಲೆ ಅವನು ತನ್ನ ಪ್ರಾಣವನ್ನೇ ಇಟ್ಟುಕೊಂಡಿದ್ದನು. ಆದರೆ ಮೀರಾಳ ಹಟವೇ ಕೊನೆಗೂ ಗೆದ್ದಿತು. ತಾನು ಉಪವಾಸ ಮಾಡುತ್ತೇನೆಂದು ಬೆದರಿಕೆ ಹಾಕಿದಳು. ಆ ಪುಟ್ಟ ಹುಡುಗಿಯ ಪರಿಶುದ್ಧ ಪ್ರೇಮವೇ ಕಡೆಗೂ ಮೇಲುಗೈಯಾಯಿತು. ಗಿರಿಧರನೇ ಆ ಸಂನ್ಯಾಸಿಯ ಕನಸಿನಲ್ಲಿ ಬಂದನು. ತಾನು ಮೀರಾಳ ಜೊತೆಯಲ್ಲಿಯೇ ಇರುತ್ತೇನೆಂದು ಹೇಳಿದನು. ಸಂನ್ಯಾಸಿಯು ಭಾರ



ವಾದ ಹೃದಯದಿಂದ ವಿಗ್ರಹವನ್ನು ಮೀರಾಳಿಗೆ ಕೊಟ್ಟನು. ಭಗವಂತನ ವಿಚಿತ್ರ ಲೀಲೆಗೆ ಆಶ್ಚರ್ಯಪಡುತ್ತ ಅವನು ಎತ್ತಲೋ ಹೊರಟುಹೋದನು. ಮೀರಾ ಹಿರಿಹಿರಿ ಹಿಗ್ಗಿದಳು. ಆನಂದದ ಬುಗ್ಗೆಯಾದಳು. ಆದರೆ ಭವಿಷ್ಯದಲ್ಲಿ ಆ ಪುಟ್ಟ ವಿಗ್ರಹವೇ ಅವಳ ಜೀವನದ ಕೇಂದ್ರಬಿಂದುವಾಗುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ.

ಮತ್ತೊಂದು ದಿವಸ ಹೀಗೆ ನಡೆಯಿತು: ಮದುವೆಯ ದಿಬ್ಬಣವೊಂದು ರಸ್ತೆಯಲ್ಲಿ ಹಾದುಹೋಗುತ್ತಿತ್ತು. ಪುಟ್ಟ ಮೀರಾ ತಾಯಿಯ ಮಡಿಲನ್ನು ಏರಿ ಕೇಳಿದಳು: ''ಅಮ್ಮಾ, ನನ್ನ ದುಲ್ಹಾ ಯಾರು?'' ಎಂದು. ದುಲ್ಹಾ ಎಂದರೆ 'ಮದುಮಗ' ಎಂದರ್ಥ. ಅದಕ್ಕೆ 'ಪ್ರಿಯತಮ' ಎಂದೂ ಅರ್ಥವಿದೆ. ತಾಯಿ ಗಿರಿಧರನ ವಿಗ್ರಹವನ್ನು ತೋರಿಸುತ್ತ ಹೇಳಿದಳು, ''ಮಗೂ, ಗಿರಿಧರ ಗೋಪಾಲನೇ ನಿನ್ನ ದುಲ್ಹಾ'' ಎಂದು. ಇದನ್ನು ಹೇಳುತ್ತ ತಾಯಿ ನಕ್ಕಳು. ಅವಳಿಗೆ ಹೇಗೆ ತಾನೇ ಗೊತ್ತಾಗಬೇಕು, ತನ್ನ ಮಗಳು ಇದನ್ನೇ ಅಕ್ಷರಶಃ ಪಾಲಿಸುತ್ತಾಳೆ ಎಂದು? ಈ ಭಾವನೆಯನ್ನು ದೊಡ್ಡವಳಾದ ಮೇಲೆ ಮೀರಾ ತನ್ನ ಒಂದು ಹಾಡಿನಲ್ಲಿ ಹೀಗೆ ವ್ಯಕ್ತಪಡಿಸಿದ್ದಾಳೆ:

**ಮೇರೇ ತೋ ಗಿರಿಧರ ಗೋಪಾಲ, ದೂಸರಾ ನಕೋಯೀ ॥**
**ಜಾಕೇ ಸಿರ ಮೋರ ಮುಕುಟ, ಮೇರೋ ಪತಿ ಸೋಯೀ ॥**

''ಗಿರಿಧರ ಗೋಪಾಲನಲ್ಲದೆ ನನಗೆ ಬೇರೆ ಯಾವ ಗಂಡನೂ ಇಲ್ಲ. ಅವನ ತಲೆಯ ಮೇಲೆ ನವಿಲುಗರಿಗಳಿಂದ ಮಾಡಿದ ಕಿರೀಟವಿದೆ. ಅವನೇ ನನ್ನ ಪತಿ.''

## ವಿವಾಹ ಮತ್ತು ಪತಿಗೃಹದಲ್ಲಿ

ಮೀರಾಳಿಗೆ ಈಗ ಎಂಟು ವರ್ಷ ವಯಸ್ಸು. ಅಷ್ಟರಲ್ಲಿ ತಾಯಿ ಮರಣಹೊಂದಿದ್ದಳು. ಮೀರಾ ತನ್ನ ತಾತನ ಮನೆಯಲ್ಲಿ ಇರಲು ಬಂದಳು. ಅವಳ ತಾತ ಒಬ್ಬ ವೈಷ್ಣವ ಭಕ್ತ. ತನ್ನ ಅಜ್ಜನ ತೊಡೆಯ ಮೇಲೆ ಕುಳಿತು ಮೀರಾ ಪುರಾಣಕತೆಗಳನ್ನು ಆಲಿಸುತ್ತಿದ್ದಳು. ಇದು ಅವಳ ಭಕ್ತಿಭಾವದ ವಿಕಸನಕ್ಕೆ ನಾಂದಿಯನ್ನು ಹಾಕಿತು.

ಮೀರಾಳಂತೂ ಗಿರಿಧರ ಗೋಪಾಲನೊಡನೆ ತನ್ನ ವಿವಾಹವು ಎಂದೋ ಆಗಿಬಿಟ್ಟಿದೆಯೆಂದೇ ಭಾವಿಸಿದ್ದಳು. ಆದರೆ ಹಿರಿಯರಾರೂ ಅವಳ ಈ ವಿಶ್ವಾಸದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ೧೫೧೬ರಲ್ಲಿ, ಅವಳಿಗೆ ಕೇವಲ ಹದಿಮೂರು ವರ್ಷ ವಯಸ್ಸಿದ್ದಾಗ, ಅವಳ ಮದುವೆ ಆಗಿಯೇ ಬಿಟ್ಟಿತು. ಮೇವಾರದ ರಾಜ ಮಹಾರಾಣಾ ಸಂಗನ ಪುತ್ರ ರಾಜಕುಮಾರ ಭೋಜರಾಜನ ಪತ್ನಿಯಾಗಿಬಿಟ್ಟಳು ಮೀರಾ.

ಮೀರಾ ಗಂಡನ ಮನೆಗೆ ಮನಸ್ಸಿಲ್ಲದ ಮನಸ್ಸಿನಿಂದ ಹೋದಳು. ಆದರೆ ಸ್ವಲ್ಪಸಮಯದಲ್ಲಿಯೇ ಎಲ್ಲರಿಗೂ ಅವಳು ನಿರಾಶೆಯನ್ನುಂಟುಮಾಡಿದಳು. ಆ ಕುಟುಂಬದ ಪದ್ಧತಿಯಂತೆ ಅವಳನ್ನು ಅರಮನೆಯ ದೇವರ ಕೊಠಡಿಗೆ ಕರೆದುಕೊಂಡು ಹೋದರು. ದೇವಿಯೇ ಆ ಕುಟುಂಬದ ದೇವತೆ. ಅಲ್ಲಿ ದೇವಿಗೇ ಪೂಜೆ ಸಲ್ಲುತ್ತಿತ್ತು. ಆದರೆ ಮೀರಾ ಗಿರಿಧರನಿಗಲ್ಲದೆ ಬೇರೆ ಯಾರಿಗೂ ನಮಸ್ಕರಿಸಲು ನಿರಾಕರಿಸಿಬಿಟ್ಟಳು. ಆ ಕಾಲದಲ್ಲಿ ಇದು ಮಹಾಪರಾಧವೇ ಸರಿ. ಅವಳ ಗಂಡನ ಕಡೆಯವರಿಗೆ ಇವಳ ಈ ವರ್ತನೆ ಆಘಾತವನ್ನು ತಂದಿತು. ಅವಳು ಅಹಂಕಾರಿಯೆಂದೂ, ಅವಿಧೇಯಳೆಂದೂ ಅವರೆಲ್ಲ ಭಾವಿಸಿದರು.

ಇನ್ನೊಂದು ಬಗೆಯಲ್ಲಿಯೂ ಮೀರಾ ಗಂಡನ ಕುಟುಂಬದವರಿಗೆ ಬಹಳ ಬೇಸರವನ್ನು ಉಂಟುಮಾಡಿದಳು. ಅವರದು ರಜಪೂತ ವಂಶ. ರಜಸ್ಸು ತುಂಬಿದ ಜನ ಅವರು. ಪ್ರಾಪಂಚಿಕ ಭೋಗಗಳಲ್ಲಿ ಮುಳುಗಿದವರು ಅವರು. ಆದರೆ ಮೀರಾ ಇವೆಲ್ಲವುಗಳಿಂದ ವಿರಕ್ತಳಾಗಿ ಕೇವಲ ಗಿರಿಧರನ ಭಜನೆ ಧ್ಯಾನಗಳಲ್ಲಿ ಕಾಲವನ್ನು ಕಳೆಯಲಾರಂಭಿಸಿದಳು. ಇಂಥ ತಾಪಸಿಯ ಜೀವನವನ್ನು ಮೀರಾಳಂತಹ ಯುವತಿ ನಡೆಸುತ್ತಾಳೆಂದು ಯಾರೂ ಊಹಿಸಿರಲಿಲ್ಲ. ಮದುವೆಯಾದ ನಂತರ ಮೀರಾ ಗಿರಿಧರನ ಪ್ರಾರ್ಥನೆಯಲ್ಲಿಯೇ ತನ್ನ ಇಡೀ ಸಮಯವನ್ನು ಕಳೆಯಲಾರಂಭಿಸಿದಳು. ಭಜನೆಗಳನ್ನು ರಚಿಸಿ ಹಾಡುವುದರಲ್ಲಿಯೇ ಕಾಲವನ್ನು ವ್ಯಯಿಸುತ್ತಿದ್ದಳು. ಇದಲ್ಲದೆ, ಅರಮನೆಗೆ ಸಾಧುಸಂತರನ್ನು ಆಹ್ವಾನಿಸಿ ಅವರ ಸೇವೆ ಮಾಡುತ್ತಿದ್ದಳು. ಅವರು ಹೇಳುವ ಆಧ್ಯಾತ್ಮಿಕ ಉಪದೇಶಗಳನ್ನು ತನ್ಮಯತೆಯಿಂದ ಆಲಿಸುತ್ತಿದ್ದಳು. ಇದಾವುದೂ ಅವಳ ಗಂಡನ ಮನೆಯವರಿಗೆ ಇಷ್ಟವಾಗಲಿಲ್ಲ.

ಈ ಬಗೆಯ ಜೀವನವಿಧಾನವನ್ನು ಬಿಟ್ಟು ಮನೆಯ ರೀತಿರಿವಾಜುಗಳಿಗೆ ಅನುಸಾರವಾಗಿ ನಡೆದುಕೊಳ್ಳುವಂತೆ ಮನೆಯವರು ಕಟ್ಟಪ್ಪಣೆ ಮಾಡಿದರು. ಆದರೆ ಅವಳು ಬದಲಾಗಲು ತಯಾರಿರ

ಲಿಲ್ಲ. ಅವಳ ಆಧ್ಯಾತ್ಮಿಕ ವ್ಯಾಕುಲತೆ ಅದೆಷ್ಟು ಉತ್ಕಟವಾಗಿತ್ತೆಂದರೆ, ಸಾಧಾರಣ ಗೃಹಸ್ಥ ಜೀವನವನ್ನು ನಡೆಸಲು ಅವಳಿಗೆ ಬಹಳ ಕಷ್ಟವಾಗುತ್ತಿತ್ತು. ನಂತರ ಮನೆಯವರು ಅವಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿದರು. ಆದರೆ ಮೀರಾ ತನ್ನದೇ ಆದ ರೀತಿಯಲ್ಲಿ ಅವರಿಗೆ ಪ್ರತಿಕ್ರಿಯೆ ನೀಡಿದಳು. ತನ್ನ ಈ ದಾರುಣ ಪರಿಸ್ಥಿತಿಯನ್ನು ಒಂದು ಹಾಡಿನಲ್ಲಿ ಅವಳು ಹೀಗೆ ತೋಡಿಕೊಳ್ಳುತ್ತಾಳೆ:

'ಸಾಧುಸಂತರ ಜೊತೆ ನಾನು ಮಾಡುವ ಸತ್ಸಂಗಕ್ಕೆ, ಗಿರಿಧರನಿಗೆ ನಾನು ಮಾಡುವ ಪೂಜೆಗೆ ಮನೆಯ ಸಂಬಂಧಿಕರೆಲ್ಲ ಇನ್ನಿಲ್ಲದ ಅಡ್ಡಿ ಆತಂಕಗಳನ್ನು ಒಡ್ಡುತ್ತಿದ್ದಾರೆ. ಆದರೆ ಮೀರಾ ಬಾಲ್ಯದಿಂದಲೂ ಗಿರಿಧರ ಗೋಪಾಲನೇ ತನ್ನ ಪ್ರಿಯತಮನೆಂದು ಭಾವಿಸಿದ್ದಾಳೆ; ಸ್ನೇಹಿತನೆಂದು ಪರಿಗಣಿಸಿದ್ದಾಳೆ. ಈ ಬಾಂಧವ್ಯವನ್ನು ಯಾರೂ ಮುರಿಯಲು ಸಾಧ್ಯವಿಲ್ಲ. ಅದು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಗುತ್ತದೆ.'

## ವೈಧವ್ಯ ಮತ್ತು ಮಂತ್ರದೀಕ್ಷೆ

ಈ ಮಧ್ಯೆ ೧೫೨೧ರಲ್ಲಿ ಮೀರಾಳ ಪತಿ ರಾಜಕುಮಾರ ಭೋಜರಾಜ ಮರಣಹೊಂದಿದನು. ಆಗ ಅವಳಿಗೆ ಕೇವಲ ಇಪ್ಪತ್ತು ವರ್ಷ ವಯಸ್ಸು. ಕೆಲವೊಂದು ಪುಸ್ತಕಗಳಲ್ಲಿ ಅವನು ತನ್ನ ಹೆಂಡತಿಯ ವಿಷಯದಲ್ಲಿ ವೈಷಮ್ಯ ಹೊಂದಿದ್ದನು ಎಂದು ಬರೆಯಲಾಗಿದೆ. ಆದರೆ ಇನ್ನು ಕೆಲವು ಪುಸ್ತಕಗಳಲ್ಲಿ ತನ್ನ ಹೆಂಡತಿಯನ್ನು ಅವನು ಬಹುವಾಗಿ ಪ್ರೀತಿಸುತ್ತಿದ್ದನು ಎಂದು ಉಲ್ಲೇಖಿಸಲಾಗಿದೆ. ಏನೇ ಇರಲಿ, ಇವನ ಸಾವಿನಿಂದ ಮೀರಾ ಎಲ್ಲ ಬಗೆಯ ಪ್ರಾಪಂಚಿಕ ಬಂಧನದಿಂದ ಮುಕ್ತಳಾದಳು. ತನ್ನ ಚಿರಂತನ ಪ್ರಿಯತಮ ಗಿರಿಧರ ಲಾಲನಲ್ಲಿ ತನ್ನನ್ನು ಸಂಪೂರ್ಣ ನಿವೇದಿಸಿಕೊಂಡಳು.

ತನ್ನ ಪತಿಯ ಸಾವಿನಿಂದ ಮೀರಾಳ ಜೀವನದಲ್ಲಿ ಹೊಸದೊಂದು ಅಧ್ಯಾಯ ಆರಂಭವಾಯಿತು. ಅದೊಂದು ಬಹಳ ಕಷ್ಟಕರ ಅವಧಿಯಾಗಿದ್ದಂತೆಯೇ, ಅವಳ ಬದುಕಿನಲ್ಲಿಯೇ ಬಹಳ ಉಪಯುಕ್ತ ಕಾಲಘಟ್ಟವೂ ಆಗಿತ್ತು. ಇದೇ ಸಮಯದಲ್ಲಿ ಅವಳು ಅಂದಿನ ಕಾಲದ ಪ್ರಸಿದ್ಧ ಸಂತ ರವಿದಾಸನ ದರ್ಶನ ಭಾಗ್ಯವನ್ನು ಪಡೆದುಕೊಂಡಳು. ಅವನಿಂದ ಮಂತ್ರದೀಕ್ಷೆಯನ್ನೂ ಸ್ವೀಕರಿಸಿದಳು. ವಿಧವೆಯ ಬಾಳು ಅವಳ ಆಧ್ಯಾತ್ಮಿಕ ಜೀವನದಲ್ಲಿ ಮಹತ್ತರವಾದ ಪರಿವರ್ತನೆಯನ್ನು ಉಂಟುಮಾಡಿತು. ಮಂತ್ರದೀಕ್ಷೆಯನ್ನು ಪಡೆದುಕೊಂಡ ಮೇಲೆ ಅವಳ ದಿವ್ಯವ್ಯಾಕುಲತೆ ಮತ್ತು ದಿವ್ಯಭಾವದಲ್ಲಿ ಮಗ್ನತೆ ತೀವ್ರವಾಯಿತು. ಸತ್ಸಂಗಕ್ಕಾಗಿ ಅವಳು ಹಾತೊರೆಯಲಾರಂಭಿಸಿದಳು. ಪ್ರಾಪಂಚಿಕ ಜೀವನದಲ್ಲಿ ತೀವ್ರ ವೈರಾಗ್ಯವನ್ನು ಅವಳು ಬೆಳೆಸಿಕೊಂಡಳು. ಇದರಿಂದಾಗಿ ಮನೆಯವರ ಜೊತೆಗಿನ ಅವಳ ಮನಸ್ತಾಪ ಮತ್ತಷ್ಟು ಹೆಚ್ಚಿತು. ಅವಳು ಅನುಭವಿಸಬೇಕಾದ ದುಃಖದುಮ್ಮಾನಗಳೂ ಕಡುಕಷ್ಟಗಳೂ ಹೆಚ್ಚಾಗುತ್ತಲೇ ಹೋದವು.

## ಹೊಸ ಸವಾಲುಗಳು

ಏತನ್ಮಧ್ಯೆ ಅವಳ ಮಾವ ರಾಣಾಸಂಗ ಮರಣಹೊಂದಿದ. ಮೀರಾಳ ಪತಿ ಭೋಜರಾಜನ ಸಹೋದರ ರಾಜಕುಮಾರ ವಿಕ್ರಮಜಿತ್ ಚಿತ್ತೋರಿನ ಅಧಿಪತಿಯಾಗಿ ನೇಮಕಗೊಂಡ. ಹೊಸ ರಾಜ ಮೀರಾಳ ಮೇಲೆ ಬಹಳ ಕ್ರೂರವಾದ ನಿರ್ಬಂಧಗಳನ್ನು ಹೇರಿದ. ತಪ್ಪಿದರೆ ಶಿಸ್ತಿನ ಕ್ರಮ ಜರುಗಿಸುವುದಾಗಿ ಹೆದರಿಸಿದ. ಇದಕ್ಕೆಲ್ಲ ಮೀರಾ ಎಳ್ಳಷ್ಟೂ ಅಂಜಲಿಲ್ಲ. ತನ್ನದೇ ಆದ ಪೂಜಾವಿಧಾನವನ್ನು ಅವಳು ಆಚರಿಸುತ್ತಲೇ ಹೋದಳು. ಭಗವಂತನ ವಿಗ್ರಹದ ಮುಂದೆ ಹಾಡುತ್ತ ಕುಳಿತುಬಿಡುವಳು. ಕೆಲವೊಮ್ಮೆ ಲಜ್ಜೆಯನ್ನು ಮೀರಿ ವಿಗ್ರಹದ ಮುಂದೆ ನೃತ್ಯಮಾಡುವಳು. ಆದರೆ ಅವಳು ಸಾಧುಸಂತರನ್ನು ಆಹ್ವಾನಿಸಿ ಸತ್ಕರಿಸುವುದಂತೂ, ರಾಜ ಪರಿವಾರದವರಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ. ಒಬ್ಬ ಮಹಿಳೆ, ಅದರಲ್ಲೂ ವಿಧವೆಯಾದವಳು ಪುರುಷರೊಡನೆ ಒಡನಾಡುವುದೆಂದರೇನು? ರಾಜ ವಿಕ್ರಮಜಿತ್ ಮೀರಾಳ ಬಗ್ಗೆ ದುರುದ್ದೇಶಪೂರಿತ ವದಂತಿಗಳನ್ನು ಹರಡಲೂ ಹೇಸಲಿಲ್ಲ.

ಮೀರಾ ಅರಮನೆಯ ಹೊರಗಡೆ ಇದ್ದ ದೇವಸ್ಥಾನಕ್ಕೆ ಹೋಗಿ ಅರ್ಚಿಸುವುದಕ್ಕೆ ನಿರ್ಬಂಧ ಹಾಕಿಬಿಟ್ಟ ರಾಜ. ಅವಳು ಅರಮನೆಯ ಒಳಗಿದ್ದ ದೇಗುಲದಲ್ಲಿಯೇ ತನ್ನ ಆರಾಧನೆಯನ್ನು ಮುಂದುವರೆಸಿದಳು. ಅವಳ ಅದ್ಭುತ ಭಕ್ತಿ ಮತ್ತು ಭಗವದುನ್ಮಾದಗಳು ಅನೇಕ ಜನರನ್ನು ಆಕರ್ಷಿಸಿದವು. ದೂರದೂರದಿಂದ ಭಕ್ತರು ಅವಳ ದರ್ಶನವನ್ನು ಪಡೆಯಲು ಬರುತ್ತಿದ್ದರು. ಇದರಿಂದ ರಾಜ ವಿಕ್ರಮಜಿತ್ತನ ಮತ್ತು ಇತರ ಬಂಧುಗಳ ಕಣ್ಣುಗಳು ಕೆಂಪಾದವು. ಮೀರಾಳನ್ನು ಬಹುತೇಕ ಬಂಧಿಯನ್ನಾಗಿ ಅವರೆಲ್ಲ ಮಾಡಿಬಿಟ್ಟರು. ಒಂದಾದ ಮೇಲೊಂದರಂತೆ ಹಲವಾರು ರೀತಿಯ ತೊಂದರೆಗಳನ್ನು ಅವಳಿಗೆ ನೀಡಿದರು. ಹೀಗಿದ್ದರೂ ತನ್ನ ಪ್ರಿಯತಮ ಗಿರಿಧರಲಾಲ ಗೋಪಾಲನಲ್ಲಿನ ಮೀರಾಳ ವಿಶ್ವಾಸ ಎಳ್ಳಷ್ಟೂ ಕಡಮೆಯಾಗಲಿಲ್ಲ ; ಅದಕ್ಕೆ ಬದಲಾಗಿ ಹೆಚ್ಚುತ್ತಲೇ ಹೋಯಿತು. ಮೀರಾ ತನ್ನೆಲ್ಲ ತೊಂದರೆಗಳನ್ನು ಹೇಳಿಕೊಂಡು ಒಂದು ಹಾಡಿನ ಕಡೆಯಲ್ಲಿ ಹೀಗೆ ಹೇಳುತ್ತಾಳೆ:

'ಇಷ್ಟೆಲ್ಲ ಆದರೂ ಮೀರಾ ಭಕ್ತಿಯ ಉನ್ಮಾದದಲ್ಲಿ ಎಲ್ಲೆಡೆ ಸುತ್ತುತ್ತಲೇ ಇದ್ದಾಳೆ; ಭಗವಂತನಿಗೆ ಅರ್ಪಿತವಾಗಿಬಿಟ್ಟಿದ್ದಾಳೆ.'


ವಿಕ್ರಮಜಿತ್ ಒಬ್ಬ ಕ್ರೂರಿ. ಮೀರಾಳ ಚಲನವಲನಗಳನ್ನು ನಿಯಂತ್ರಿಸಲು ಅವನು ತನ್ನ ಸಹೋದರಿಯಾದ ಉದಾಬಾಯಿಯನ್ನೇ ನೇಮಿಸಿದ. ಇದಲ್ಲದೆ ಮೂವರು ಹೆಂಗಸರು ಮೀರಾಳ ಕಾವಲಿಗೆ ನಿಂತರು. ಇದಲ್ಲದೆ ಉದಾಬಾಯಿ ಮೀರಾಳ ಮನವೊಲಿಸಲು ಕೂಡ ಪ್ರಯತ್ನಿಸಿದಳು. ಆದರೆ ಮೀರಾಬಾಯಿ ರಾಜ ವಿಕ್ರಮಜಿತ್‌ನ ಆದೇಶಕ್ಕೆ ಬದ್ಧಳಾಗಲು ನಿರಾಕರಿಸಿಬಿಟ್ಟಳು. ''ಗಿರಿಧರನೊಬ್ಬನೇ ನನ್ನ ಶರಣು. ಅವನನ್ನೇ ನಾನು ನಿಸ್ಪೃಹತೆಯಿಂದ ಪ್ರಾರ್ಥಿಸುತ್ತೇನೆ'' ಎಂದಳು. ಮೀರಾಳಲ್ಲಿ ಯಾವ ಪರಿವರ್ತನೆಯೂ ಆಗಲಿಲ್ಲ; ಆದರೆ ಉದಾಬಾಯಿಯಲ್ಲಿಯೇ ಮಹತ್ವದ ಪರಿವರ್ತನೆ ಆಯಿತು. ಮೀರಾಳ ಸತ್ಸಂಗ ಅವಳ ಮನಸ್ಸನ್ನು ಪ್ರಾಪಂಚಿಕ ವಿಷಯಗಳಿಂದ ಬಿಡಿಸಿತು; ಭಗವಂತನಲ್ಲಿ ಆಕರ್ಷಿತಳಾಗುವಂತೆ ಮಾಡಿತು.

ಒಮ್ಮೆ ಉದಾಬಾಯಿ ಗಿರಿಧರಲಾಲನ ದರ್ಶನವನ್ನು ಮಾಡಿಸುವಂತೆ ಮೀರಾಳನ್ನು ಅಂಗಲಾಚಿದಳು. ಇದರಿಂದ ಮೀರಾಳ ಮನಸ್ಸು ಕರಗಿತು. ಉದಾಬಾಯಿಯ ಪ್ರಾರ್ಥನೆಯನ್ನು ಪೂರ್ತಿಗೊಳಿಸುವಂತೆ ಗಿರಿಧರಲಾಲನಲ್ಲಿ ಗೋಗರೆದಳು ಮೀರಾ. ಮೀರಾಳ ಹೃದಯದ ನೋವು ಹಾಡುಗಳ ರೂಪದಲ್ಲಿ ಅವಳ ಮಧುರಕಂಠದಿಂದ ಹೊರಬರುತ್ತಿತ್ತು. ಅಲ್ಲದೆ ಮೂರು ಜನ ಸೇವಕಿಯರು – ಮಿಥುಲ, ಚಂಪಾ ಮತ್ತು ಚಮೇಲಿ – ಅವರೂ ಕೂಡ ದೇವಮಂದಿರದಲ್ಲಿ ಕುಳಿತಿದ್ದರು. ಹಠಾತ್ತಾಗಿ, ಗಿರಿಧರಲಾಲನು ಪ್ರತ್ಯಕ್ಷನಾದನು. ''ಮೀರಾ, ನನಗೋಸ್ಕರ ಇಂದು ರಾತ್ರಿ ಇಷ್ಟೊಂದು ಹೃದಯವೇದನೆಯನ್ನು ಅದೇಕೆ ಅನುಭವಿಸುತ್ತಿರುವೆ?'' ಎಂದು ಕೇಳಿದನು. ಉದಾಬಾಯಿ ಮಾತ್ರವಲ್ಲದೆ, ಆ ಮೂರು ಜನ ಸೇವಕಿಯರೂ ಭಗವಂತನ ದರ್ಶನವನ್ನು ಪಡೆದರು.

ಉದಾಬಾಯಿಯನ್ನೂ ನಂಬಲಾಗದು ಎಂದು ಬಗೆದ ವಿಕ್ರಮಜಿತ್ ತನ್ನ ನಂಬಿಕಸ್ಥರಾದ ಕಾವಲುಭಟರನ್ನು ಮೀರಾಳ ಮೇಲೆ ನಿಗಾ ಇಡಲು ನಿಯಮಿಸಿದ. ಅವರು ಹಗಲೂ ರಾತ್ರಿ ಮೀರಾ ಪೂಜಿಸುತ್ತಿದ್ದ ದೇಗುಲದ ಬಳಿಯೇ ಕಾವಲು ನಿಂತಿದ್ದರು. ಒಂದು ಮಧ್ಯರಾತ್ರಿಯ ಸರಿಹೊತ್ತು. ಕಾವಲುಭಟನೊಬ್ಬ ರಾಜನಿಗೆ ಸುದ್ದಿ ತಂದ. ಮೀರಾ ದೇವಸ್ಥಾನದ ಒಳಗೆ ಯಾರೊಡನೆಯೋ ಮಾತನಾಡುತ್ತಿದ್ದಾಳೆ ಎಂದು. ರಾಜ ಕ್ರುದ್ಧನಾದ. ಕತ್ತಿಯನ್ನು ಝಳಪಿಸುತ್ತ ಬಂದು, ದೇಗಲದ ಬಾಗಿಲನ್ನು ತೆಗೆದ. ಮೀರಾಳಿಗೆ ಗದರಿಸಿದ. ''ಅದಾವನ ಜೊತೆಗೆ ನೀನು ಇದುವರೆಗೂ ಲಲ್ಲೆಯಾಡುತ್ತಿದ್ದುದು?'' ಎಂದು. ಮೀರಾ ಧೈರ್ಯವಾಗಿ ವಿಗ್ರಹವನ್ನು ತೋರಿಸುತ್ತ ಹೇಳಿದಳು, ''ನನ್ನ ಪ್ರಿಯತಮನು ಇಲ್ಲಿಯೇ, ನಿನ್ನ ಎದುರಿಗೇ ಇದ್ದಾನೆ. ನನ್ನನ್ನೇಕೆ ಕೇಳುತ್ತಿದ್ದೀಯೆ?''

ದುರಹಂಕಾರಿ ರಾಜ ದೇಗುಲವನ್ನೆಲ್ಲ ಹುಡುಕಿದ. ಆ ಕಾಳ ರಾತ್ರಿಯಲ್ಲಿ ಘೋರವಾದ ನರಸಿಂಹ ರೂಪವು ಅವನಿಗೆ ಎದುರಾಯಿತು. ಅದನ್ನು ಕಂಡು ಭಯದಿಂದ ಪ್ರಜ್ಞೆತಪ್ಪಿ ಬಿದ್ದ ವಿಕ್ರಮಜಿತ್. ಇದನ್ನು ಕಂಡು ಮೀರಾಳಿಗೇನೂ ಆಶ್ಚರ್ಯವಾಗಲಿಲ್ಲ. ಅವಳೊಡನೆ ವಿಹರಿಸುತ್ತಿದ್ದ ಗಿರಿಧರಲಾಲನೇ ಈಗ ಭಯಂಕರ ನರಸಿಂಹನ ವತಾರವನ್ನು ತಳೆದಿದ್ದಾನೆ ಎಂದು ಅವಳಿಗೆ ಸ್ಪಷ್ಟವಾಯಿತು. ರಾಜನಿಗೆ ಇದೊಂದು ಆಘಾತಕಾರಿ ಅನುಭವ. ಕುಟುಂಬದ ಮರ್ಯಾದೆಯೇ ಅವನಿಗೆ ಮುಖ್ಯವಾಗಿತ್ತು. ಅದನ್ನು ಕಾಪಾಡಿಕೊಳ್ಳಲು ರಾಜ್ಯ ಬಿಟ್ಟು ತೊಲಗುವಂತೆ ಅವನು ಮೀರಾಳಿಗೆ ಆದೇಶವಿತ್ತ. ಮೀರಾ ಅತಿ ಧೈರ್ಯವಂತೆ. ತನಗೆ ಮುಂದೇನು ಕಾದಿದೆಯೋ ಎಂದು ಅವಳು ಎದೆಗುಂದಲಿಲ್ಲ. ಗಿರಿಧರನೇ ಅವಳಿಗೆ ಗತಿ ಮತ್ತು ಪ್ರಿಯನೂ ಆಗಿರುವನಲ್ಲವೆ? ಇನ್ನೇತರ ಭಯ ಅವಳಿಗೆ? ಆ ಸಂದರ್ಭದಲ್ಲಿ ಅವಳು ಹೀಗೆ ಹಾಡಿದಳಂತೆ:

'ರಾಣಾ (ವಿಕ್ರಮಜಿತ್) ಕೋಪಗೊಂಡರೆ, ಅದರಿಂದ ನನಗೇನು? ನನಗೆ ಅವನೇನು ತಾನೇ ಮಾಡಬಲ್ಲ? ಓ ಸ್ನೇಹಿತೆ, ನಾನು ಗಿರಿಧರಲಾಲನ ಮಹಿಮೆಯನ್ನು ಹಾಡುತ್ತ ಕಾಲ ಕಳೆಯುತ್ತೇನೆ. ರಾಣಾ ಕೋಪಗೊಂಡರೆ, ನನ್ನ ಗಿರಿಧರಲಾಲನ ರಾಜ್ಯ ನನಗೆ ಆಶ್ರಯ ನೀಡುತ್ತದೆ. ಆದರೆ ಆ ಭಗವಂತನು ಕೋಪಗೊಂಡರೆ, ನಾನು ಹೋಗುವುದೆಲ್ಲಿಗೆ? ಸ್ನೇಹಿತೆಯರೇ, ಪ್ರಾಪಂಚಿಕ ರೀತಿರಿವಾಜುಗಳನ್ನು ನಾನು ಲೆಕ್ಕಿಸುವುದಿಲ್ಲ; ಸ್ವಾತಂತ್ರ್ಯದ ಬಾವುಟವನ್ನು ಹಾರಿಸುತ್ತೇನೆ. ಭಗವನ್ನಾಮದ ಹಡಗನ್ನು ನಾನು ಹುಟ್ಟು ಹಾಕುತ್ತೇನೆ. ಹೀಗೆ ನಾನು ಈ ಮಾಯಾಜಗತ್ತನ್ನು ದಾಟುತ್ತೇನೆ. ಸ್ನೇಹಿತೆಯರೇ, ಸರ್ವಶಕ್ತಿಮಂತನಾದ ಗಿರಿಧರನಲ್ಲಿ ಮೀರಾ ಶರಣು ಹೊಂದಿದ್ದಾಳೆ. ಅವನ ಪಾದಗಳನ್ನು ಆಶ್ರಯಿಸಿದ್ದಾಳೆ.'


ಕಲಾವಿದ ಕಂಡಂತೆ ಮೀರಾಬಾಯಿ